1087 (1470) ಶ್ರೀ ಸಿದ್ದು ಸವದಿ (ಜಮಖಂಡಿ) :– ಮಾನ್ಯ ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಬಾಗಲಕೋಟೆ ಜಿಲ್ಲೆಯಲ್ಲಿ ಜಲ ನಿರ್ಮಲ ಯೋಜನೆ ಅಡಿ ಎಷ್ಟು ಗ್ರಾಮಗಳನ್ನು ಆಯ್ಕೆ ಮಾಡಲಾಗಿತ್ತು (2006–07ರಲ್ಲಿ ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಈಗ ಆಗಿರುವ ಪ್ರಗತಿ ಎಷ್ಟು ಮತ್ತು ಇದೇ ಪ್ರಕಾರ ಇಡೀ ರಾಜ್ಯದಲ್ಲಿ ಆದ ಜಿಲ್ಲಾವಾರು ಪ್ರಗತಿ ಎಷ್ಟು;

(ಇ) ಬಾಗಲಕೋಟೆ ಜಿಲ್ಲೆಯಲ್ಲಿ ಈ ಯೋಜನೆಯ ಪ್ರಗತಿ ಕುಂಟಿತಗೊಳ್ಳಲು ಕಾರಣರಾರು; ಅವರ ಮೇಲೆ ಸರ್ಕಾರ ಏನು ಕ್ರಮ ಕೈಗೊಳ್ಳಲಾಗಿದೆ;

(ಈ) ಉಳಿದಂತಹ ಯೋಜನೆಯಲ್ಲಿ ಬಾಕಿ ಇರುವ ಸಂಪೂರ್ಣ ಕೆಲಸಗಳನ್ನು ಯಾವಾಗ ಪೂರೈಸಲಾಗುವುದು?

ಶ್ರೀ ಎಸ್.ಎ. ರವೀಂದ್ರನಾಥ (ಮಾನ್ಯ ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು)

(ಅ) ಜಲ ನಿರ್ಮಲ ಯೋಜನೆಯು ವಿಶ್ವಬ್ಯಾಂಕ್ ನೆರವಿನ ಯೋಜನೆಯಾಗಿದ್ದು, ಇದರಲ್ಲಿ ಕುಡಿಯುವ ನೀರು ಯೋಜನೆಯನ್ನು ಬೇಡಿಕೆ ಆಧಾರದ ಮೇಲೆ ನೀರಿನ ಗುಣಮಟ್ಟ ತೊಂದರೆಯಿರುವ ಗ್ರಾಮಗಳಲ್ಲಿ ತೆಗೆದುಕೊಳ್ಳಲಾಗಿದೆ. ಈ ಯೋಜನೆಯಡಿ, 72 ಗ್ರಾಮಗಳನ್ನು ಹಂತ–3ರಡಿಯಲ್ಲಿ ಆಯ್ಕೆ ಮಾಡಲಾಗಿರುತ್ತದೆ. ತಾಲ್ಲೂಕುವಾರು ಮಾಹಿತಿ ಈ ಕೆಳಗಿನಂತಿದೆ.

ಕ್ರ.ಸಂ.	ತಾಲ್ಲೂಕು	ಗ್ರಾಮಗಳ ಸಂಖ್ಯೆ
1	ಬಾದಾಮಿ	19
2	ಹುನಗುಂದ	21
3	ಬಾಗಲಕೋಟೆ	10
4	ಬೀಳಗಿ	0
5	ಮುಧೋಳ	18
6	ಜಮಖಂಡಿ	4
	ಒಟ್ಟು	72

(ಆ) ಬಾಗಲಕೋಟೆ ಜಿಲ್ಲೆಯಲ್ಲಿ 222 ಕುಡಿಯುವ ನೀರು ಸರಬರಾಜು ಕಾಮಗಾರಿಗಳನ್ನು ಹಂತ–1 ಮತ್ತು ಹಂತ–3ರಲ್ಲಿ ತೆಗೆದುಕೊಂಡಿದೆ. ಇವುಗಳ ಪೈಕಿ 141 ಗ್ರಾಮಗಳ ನೀರು ಸರಬರಾಜು ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.

ಜಲ ನಿರ್ಮಲ ಯೋಜನೆಯನ್ನು ರಾಜ್ಯದ ಉತ್ತರ ಕರ್ನಾಟಕದ 11 ಜಿಲ್ಲೆಗಳಾದ ಬಾಗಲಕೋಟೆ, ಬೆಳಗಾಂ, ಬೀದರ್, ಬಿಜಾಪುರ, ಧಾರವಾಡ, ಗದಗ, ಗುಲ್ಬರ್ಗಾ, ಹಾವೇರಿ, ಕೊಪ್ಪಳ, ರಾಯಚೂರು ಮತ್ತು ಉತ್ತರ ಕನ್ನಡ ಜಿಲ್ಲೆಗಳ 744 ಗ್ರಾಮ ಪಂಚಾಯತಿಗಳ 3064 ಗ್ರಾಮ/ಜನವಸತಿಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಜೂನ್–2007ರ ಮಾಸಾಂತ್ಯಕ್ಕೆ ಯೋಜನಾ ಜಿಲ್ಲೆಗಳಲ್ಲಿ ಆದ ಜಿಲ್ಲಾವಾರು ಪ್ರಗತಿ ವಿವರವನ್ನು ಅನುಬಂಧ–1ರಲ್ಲಿ ನೀಡಲಾಗಿದೆ.

(ಇ) ಬಾಗಲಕೋಟೆ ಜಿಲ್ಲೆಯಲ್ಲಿ 222 ಕುಡಿಯುವ ನೀರು ಸರಬರಾಜು ಕಾಮಗಾರಿಗಳನ್ನು ವಿವಿಧ ಹಂತಗಳಲ್ಲಿ ತೆಗೆದುಕೊಂಡಿದೆ. ಇವುಗಳ ಪೈಕಿ 141 ಕಾಮಗಾರಿಗಳು ಮುಗಿದಿರುತ್ತದೆ. ಯೋಜನೆಯ ಹಂತ–3ರಡಿ 72 ಕುಡಿಯುವ ನೀರಿನ ಕಾಮಗಾರಿಗಳನ್ನು ಅನುಷ್ಠಾನಕ್ಕೆ ಇತ್ತೀಚೆಗೆ ತೆಗೆದುಕೊಳ್ಳಲಾಗಿದ್ದು, ಕಾಮಗಾರಿಗಳು ಪ್ರಗತಿಯಲ್ಲಿವೆ..

(ಈ) ಉಳಿದ ಕಾಮಗಾರಿಗಳನ್ನು ಡಿಸೆಂಬರ್–2007ಕ್ಕೆ ಅಂತ್ಯಗೊಳಿಸಲು ಉದ್ದೇಶಿಸಲಾಗಿದೆ.

1088 (1471) ಶ್ರೀ ಸಿದ್ದು ಸವದಿ (ಜಮಖಂಡಿ) :– ಮಾನ್ಯ ವಸತಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಜಮಖಂಡಿ ರಬಕವಿ–ಬನಹಟ್ಟಿ ಮತ್ತು ತೇರದಾಳ ನಗರಗಳಲ್ಲಿ ಬಹಳಷ್ಟು ಬಡವರು ಆಶ್ರಯ ರಹಿತರಿರುವುದು ಸರ್ಕಾರದ ಗಮನಕ್ಕೆ ಬಂದಿದೆ;

(ಆ) ಬಂದಿದ್ದಲ್ಲಿ, ಯಾವಾಗ ಅವರುಗಳೆಲ್ಲರಿಗೂ ಸಬ್ಸಿಡಿಯಲ್ಲಿ ಮನೆಗಳನ್ನು ನೀಡಲಾಗುವುದು;

(ಇ) ಪಟ್ಟಣಗಳಲ್ಲಿ ಕಡುಬಡವರು ಕೂಲಿ ಮಾಡಿ ಜೀವನ ಸಾಗಿಸುವ ಸ್ಥಿತಿಯಲ್ಲಿರುವಾಗ ಅವರುಗಳಿಗೂ ಸಹ ಗ್ರಾಮೀಣ ಪ್ರದೇಶದವರಂತೆ ಸಬ್ಸಿಡಿಯಲ್ಲಿ ಮನೆ ಮಂಜೂರು ಮಾಡಲು ಸರ್ಕಾರಕ್ಕೆ ಇರುವ ತೊಂದರೆಗಳೇನು;

(ಈ) ಈ ವರ್ಷ ನಗರ ಪ್ರದೇಶಗಳಿಗೆ ಎಷ್ಟು ಮನೆ ನೀಡಲಾಗುವುದು; ಯಾವ ಯಾವ ಯೋಜನೆಯಲ್ಲಿ ವಿತರಿಸಲಾಗುವುದು?

ಶ್ರೀ ಡಿ.ಟಿ. ಜಯಕುಮಾರ್ (ಮಾನ್ಯ ವಸತಿ ಸಚಿವರು)

(ಅ) ಹೌದು ಜಮಖಂಡಿ ರಬಕವಿ–ಬನಹಟ್ಟಿ ಮತ್ತು ತೇರದಾಳ ನಗರಗಳಲ್ಲಿರುವ ಕಡುಬಡವರಿಗೆ ನಗರ ಆಶ್ರಯ ಯೋಜನೆಯಡಿ ವಸತಿ ಸೌಕರ್ಯ ಕಲ್ಪಿಸಿಕೊಡುವ ಅವಕಾಶವಿರುತ್ತದೆ. ಈ ಯೋಜನೆಯಡಿ ಸದ್ಯ ಜಾರಿಯಲ್ಲಿರುವ ನಿಯಮಗಳ ಪ್ರಕಾರ